**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು–ಮಡಿಕೇರಿ**

**ಸ್ಪೆಷಲ್ ಕೇಸ್ (ಇಲ್ಲಿಸಿಟಿ) ಸಂಖ್ಯೆ: 18/2023**

**ಪಿರ್ಯಾದುದಾರರು:** ರಾಜ್ಯ ಸರ್ಕಾರದ ಪರವಾಗಿ,
ಕುಶಾಲನಗರ ಗ್ರಾಮಾಂತರ ಪೋಲಿಸ್ ಠಾಣೆ
ಮಡಿಕೇರಿ, ಕೊಡಗು ಜಿಲ್ಲೆ.

– ವಿರುದ್ಧ –

**ಆರೋಪಿತ:** ಚಂದ್ರ ಹೆಚ್. ಇ.,
ತಂದೆ: ದಿವಂಗತ ಈರಯ್ಯ,
ವಯಸ್ಸು: 60 ವರ್ಷ,
ವಾಸ: ಹೊಸಕಾಡು ಗ್ರಾಮ,
ಬಸವನಹಳ್ಳಿ, ಕೊಡಗು ಜಿಲ್ಲೆ.

**ಭಾರತೀಯ ನಾಗರೀಕ ಸುರಕ್ಷಾ ಸಂಹಿತಾ, 2023 ಕಲಂ 351 (ದಂಡ ಪ್ರಕ್ರಿಯೆ ಸಂಹಿತೆ ಕಲಂ 313) ರಡಿಯಲ್ಲಿ ಆರೋಪಿತನ ಹೇಳಿಕೆ**

ಪ್ರಶ್ನೆ 1. ಈ ಮೊಕದ್ದಮೆಯಲ್ಲಿ ಅಭಿಯೋಜನೆಯ ಪರ ನುಡಿದ ಸಾಕ್ಷಿದಾರರ ಸಾಕ್ಷ್ಯವನ್ನು ನೀವು ಆಲಿಸಿದ್ದೀರಾ?

ಉತ್ತರ: ಕೇಳಿಸಿದೆ

ಪ್ರಶ್ನೆ 2. ಫ್ರಾಸಾ–1, ಶ್ರೀ ಗೌತಮ್ ಡಿ.ಎಸ್., ಗ್ರಾಮ ಲೆಕ್ಕಾಧಿಕಾರಿ, ಕುಶಾಲನಗರ ಇವರು ತಮ್ಮ ಸಾಕ್ಷ್ಯದಲ್ಲಿ ಫ್ರಾಸಾ–2 ಅರಣ್ಯ ಅಧಿಕಾರಿ, ಚಾಸಾ–2 ಪಿಡಿಓ, ದಿನಾಂಕ 29.07.2021ರಂದು ಕುಶಾಲನಗರ ಗ್ರಾಮಾಂತರ ಠಾಣೆಯವರು ನನಗೆ ಮಾಹಿತಿ ನೀಡಿ, ಬಸವನಹಳ್ಳಿ ಗ್ರಾಮದಲ್ಲಿ ಆನೆ ಸತ್ತಿರುವ ಬಗ್ಗೆ ಅರಣ್ಯಾಧಿಕಾರಿಗಳು ದೂರು ಕೊಟ್ಟಿದ್ದಾರೆ ಈ ಬಗ್ಗೆ

ಮಹಜರಿಗೆ ಸಹಕರಿಸಬೇಕಾಗಿ ಕೋರಿದರು, ಅದರಂತೆ ಪೊಲೀಸರು ನನಗೆ ನಿಪಿ-1 ರಂತೆ ನೋಟಿಸ್ ಕೊಟ್ಟಿದ್ದು ನಾನು ಬೆಳಿಗ್ಗೆ 10-30 ಗಂಟೆಗೆ ಸ್ಥಳಕ್ಕೆ ಹೋದೆ. ನಾನು ಬಸವನಹಳ್ಳಿ ಗ್ರಾಮದ ಗೌರಮ್ಮ ಮತ್ತು ಲತಾ ಎಂಬುವರ ಜಮೀನಲ್ಲಿಗೆ ಹೋದೆ. ಫ್ರಾಸಾ-1 ಮತ್ತು ಚಾಸಾ-2 ರವರು ಸಹ ಆ ಸಮಯದಲ್ಲಿ ಹಾಜರಿದ್ದರು, ಪೊಲೀಸ್ ಅಧಿಕಾರಿಗಳು ಸಹ ಹಾಜರಿದ್ದರು ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 3. ಫ್ರಾಸಾ-1 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಸದರಿ ಜಾಗದಲ್ಲಿ ಶುಂಠಿ ಬೆಳೆ ಬೆಳೆಯಲಾಗಿತ್ತು, ನಾವು ನೋಡಿದಾಗ ಗೌರಮ್ಮ ಮತ್ತು ಲತಾ ರವರಿಗೆ ಸೇರಿದ್ದ ಜಾಗದಲ್ಲಿ ಆನೆ ಸತ್ತು ಬಿದ್ದಿತ್ತು, ಸೊಂಡಿಲಿಗೆ ತಂತಿ ಸುತ್ತಿಕೊಂಡಿತ್ತು, ಅಲ್ಲಿ ತಂತಿ ಬೇಲಿ ಹಾಕಿದ್ದು, ಅದರ ಪಕ್ಕದಲ್ಲೆ ಆನೆ ಸತ್ತು ಬಿದ್ದಿತ್ತು. ಪಶುವೈದ್ಯರಿಗೆ ಮನವಿ ಸಲ್ಲಿಸಿ ಆನೆಯ ಮರಣೋತ್ತರ ಪರೀಕ್ಷೆ ಮಾಡಿಸಿರುತ್ತಾರೆ. ಆನೆಯ ದಂತವನ್ನ ಹೊರತೆಗೆದು ಅಮಾನತುಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 4. ಫ್ರಾಸಾ-1 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಆನೆಯನ್ನು ಅದೇ ಜಾಗದಲ್ಲಿ ಗುಂಡಿ ತೆಗೆದು ಹೂಳಿರುತ್ತಾರೆ. ಪೊಲೀಸರು ಸದರಿ ಸಮಯದಲ್ಲಿ ನಿಪಿ-2 ರಂತೆ ಮಹಜರು ಮಾಡಿ ಅಲ್ಲಿಂದ ಆನೆ ದಂತ, 16 ಮೀಟರ್ ಉದ್ದದ ತಂತಿ ಇವುಗಳನ್ನ ಅಮಾನತುಪಡಿಸಿಕೊಂಡರು, ಸ್ಥಳದಲ್ಲಿ ಪೊಲೀಸರು ನಿಪಿ-3 ರಂತೆ ಪೊಟೋ ತೆಗೆದಿರುತ್ತಾರೆ. ಸದರಿ ಆನೆ ತಂತಿ ಬೇಲಿಗೆ ವಿದ್ಯುತ್ ಹರಿಸಿದ ಕಾರಣ ಅದು ಸಂಪರ್ಕ ಹೊಂದಿ ಮೃತ ಪಟ್ಟಿತ್ತು ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 5. ಫ್ರಾಸಾ–1 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಆನಂತರ ನಾವು ಚಂದ್ರ ರವರ ಮನೆ ಬಳಿ ಹೋದೆವು, ವಿದ್ಯುತ್ ಎಲ್ಲಿಂದ ಬಂದಿದೆ ಎಂದು ನಾವು ಚೆಕ್ ಮಾಡುತ್ತಾ ಹೋದೆವು, ನಾವು ಆ ರೀತಿ ಹಿಂಭಾಗದಿಂದ ಹೋದಾಗ ಚಂದ್ರ ರವರ ಮನೆಯ ಡೈನಿಂಗ್ ಹಾಲ್ ಪಕ್ಕದಲ್ಲಿ ಒಂದು ರೂಂ ಇತ್ತು ಅಲ್ಲಿ ಬ್ಯಾಟರಿ ಮತ್ತು ಚಾರ್ಜರ್ ಇತ್ತು. ಸೋಲಾರ್ fence Energizer, 15 ಅಡಿ ಉದ್ದದ ಬಿಳಿ ಬಣ್ಣದ ವಿದ್ಯುತ್ ವೈಯರ್, 4 ಅಡಿ ಉದ್ದದ ಕಬ್ಬಿಣದ ತಂತಿ, ಇವುಗಳನ್ನ ಪೊಲೀಸರು ಅಮಾನತುಪಡಿಸಿಕೊಂಡರು. ಈ ಸಂಬಂಧವಾಗಿ ಪೊಲೀಸರು ಸ್ಥಳದಲ್ಲಿ ನಿಪಿ–4 ರಂತೆ ಮಹಜರು ಮಾಡಿದರು. ಈ ಬಗ್ಗೆ ಪೊಲೀಸರ ಮುಂದೆ ನಾನು ಹೇಳಿಕೆ ಕೊಟ್ಟಿದ್ದೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 6. ಫ್ರಾಸಾ–2 ಶ್ರೀ ಅನನ್ಯ ಕುಮಾರ್ ಜಿ ವಲಯ ಅರಣ್ಯಾಧಿಕಾರಿ, ಪುಷ್ಪಗಿರಿ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 29.07.2021 ರಂದು ಕುಶಾಲನಗರ ವಲಯದ ಅತ್ತೂರು ಶಾಖೆಯ ಅಂದಗೋವೆ ಗಸ್ತಿನ ವ್ಯಾಪ್ತಿಯಲ್ಲಿ ಬಸವನಹಳ್ಳಿ ಗ್ರಾಮದ ಹೊಸಕಾಡು ಎಂಬಲ್ಲಿ ವಿದ್ಯುತ್ ಸ್ಪರ್ಶದಿಂದ ಕಾಡಾನೆ ಮೃತ ಪಟ್ಟಿರುವ ಬಗ್ಗೆ ಮಾಹಿತಿ ಬಂದಿತು, ಆ ಪ್ರಕಾರ ನಾನು ಮತ್ತು ಸಿಬ್ಬಂದಿ ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ ಅಲ್ಲಿ ಚಂದ್ರಪ್ಪ ಮತ್ತು ಗೌರಮ್ಮ ಎಂಬುವರ ಹೊಲಗಳ ಮಧ್ಯದಲ್ಲಿ ಸೋಲಾರ್ ತಂತಿ ಬೇಲಿ ಅಳವಡಿಸಿರುವುದು ಕಂಡುಬಂತು, ಸದರಿ ಸೋಲಾರ್ ತಂತಿಗೆ ಸೊಂಡಲು ತಾಗಿ ಆನೆ ಗೌರಮ್ಮ ಮತ್ತು ಲತಾ ಇವರ ಜಮೀನಲ್ಲಿ ಮೃತಪಟ್ಟಿರುವುದು ಕಂಡುಬಂತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 7. ಫ್ರಾಸಾ–2 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಸದರಿ ಸೋಲಾರ್ ತಂತಿಯನ್ನು ಆರೋಪಿ ಅಳವಡಿಸಿದ್ದಾರೆ ಎಂದು ಮಾಹಿತಿ ಬಂತು. ಅವರ ಮನೆಗೆ ಹೋಗಿ ಪರಿಶೀಲಿಸಿರುತ್ತೇನೆ. ಅವರು ಯಾವುದೇ ಸೋಲಾರ್

ಪ್ಯಾನಲ್ ಗಳನ್ನ ಅಳವಡಿಸದೆ ನೇರವಾಗಿ ಮನೆಯ ವಿದ್ಯುತ್ ಸಂಪರ್ಕದಿಂದ ಬ್ಯಾಟರಿಗೆ ಚಾರ್ಜ್ ಮಾಡಿ ಬ್ಯಾಟರಿಯಿಂದ ಒಂದು ಬಿಳಿ ಬಣ್ಣದ ತಂತಿಯಿಂದ ಸೋಲಾರ್ ತಂತಿಗೆ ಅಳವಡಿಸಿರುವುದು ಕಂಡುಬಂತು. ಸದರಿ ಕೃತ್ಯ ವನ್ಯಜೀವಿ ಸಂರಕ್ಷಣಾ ಕಾಯ್ದೆ ಮತ್ತು ವಿದ್ಯುತ್‌ಚ್ಚಕ್ತಿ ಕಾಯ್ದೆಗೆ ವಿರುದ್ದವಾಗಿದ್ದರಿಂದ ಈ ಬಗ್ಗೆ ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ನಿಪಿ-6 ರಂತೆ ದೂರನ್ನ ದಾಖಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 8. ಫ್ರಾಸಾ-2 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಅನಂತರ ಪೊಲೀಸರು ನನಗೆ ನಿಪಿ-7 ರಂತೆ ನೋಟಿಸ್ ನೀಡಿ ಕೃತ್ಯ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಪೊಲೀಸರು ಅದೇ ದಿನ ಸ್ಥಳಕ್ಕೆ ವಿದ್ಯುತ್‌ಚಕ್ತಿ ವಿಭಾಗದ ಅಧಿಕಾರಿಗಳನ್ನು ಹಾಗೂ ಪಂಚಾಯಿತಿ ಅಧಿಕಾರಿ, ಗ್ರಾಮಲೆಕ್ಕಾಧಿಕಾರಿ, ಇವರನ್ನು ಸ್ಥಳಕ್ಕೆ ಬರ ಮಾಡಿಕೊಂಡಿದ್ದರು. ಚಂದ್ರಪ್ಪ ರವರ ಮನೆಯಿಂದ ಬ್ಯಾಟರಿ ಚಾರ್ಜರ್, ಬ್ಯಾಟರಿ, ಸೋಲರ್ energizer, ಒಂದು ಕಬ್ಬಿಣದ ತಂತಿ, ಒಂದು ಬಿಳಿ ಬಳಣ್ಣದ ಸರ್ವಿಸ್ ವೈರ್ ಇವುಗಳನ್ನ ಅಮಾನತುಪಡಿಸಿಕೊಂಡರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 9. ಫ್ರಾಸಾ-2 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಆನಂತರ ನಾನು ಇಲಾಖಾ ಪಶು ವೈದ್ಯಾಧಿಕಾರಿಗೆ ಕರೆ ಮಾಡಿ ಅವರನ್ನು ಸ್ಥಳಕ್ಕೆ ಬರಮಾಡಿಕೆಂಡು ಮೃತ ಪಟ್ಟಿದ್ದ ಗಂಡಾನೆ ಮರಣೋತ್ತರ ಪರೀಕ್ಷೆ ನಡೆಸಿರುತ್ತಾರೆ. ಶವ ಪರೀಕ್ಷೆ ನಂತರ ಸದರಿ ಗಂಡಾನೆಯ ದಂತಗಳನ್ನ ಹೊರತೆಗೆದು ಅವುಗಳನ್ನ ಸುರಕ್ಷತೆಗಾಗಿ ಕುಶಾಲನಗರದ ಶ್ರೀಗಂಧದಕೋಟೆಗೆ ಸಾಗಿಸಿರುತ್ತೇವೆ. ಪಶುವೈದ್ಯಾಧಿಕಾರಿಗಳು ಆನೆಯ ಮರಣೊತ್ತರ ಪರೀಕ್ಷಾ ವರದಿಯನ್ನು ನಿಪಿ-8 ರಂತೆ ದಿನಾಂಕ

HFC

05.08.2021ರಂದು ನೀಡಿರುತ್ತಾರೆ. ಅದನ್ನು ನಾನು ಪೊಲೀಸರಿಗೆ ರವಾನಿಸಿರುತ್ತೇನೆ. ಅದೇ ಸಮಯದಲ್ಲಿ ನಿಪಿ-3 ರಂತೆ ಫೋಟೋಗಳನ್ನು ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 10. ಫ್ರಾಸಾ-2 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಅದೇ ದಿನ ಆರೋಪಿಯ ಮನೆಯಲ್ಲಿ ನಿಪಿ-4 ರಂತೆ ಬರೆದ ಮಹಜರಿಗೆ ನಾನು ಸಹಿ ಮಾಡಿದ್ದು ಆನೆ ದಂತಗಳನ್ನ ನಮ್ಮ ವಶಕ್ಕೆ ಪಡೆದಿದ್ದು ಆನೆಯ ಸೊಂಡಲಿಗೆ ಸುತ್ತಿಕೊಂಡಿದ್ದ ಸೋಲಾರ್ ತಂತಿಯನ್ನು ಹಾಗೂ ಮುಮಾ-1 ರಿಂದ ಮುಮಾ-4 ನ್ನು ಸಹ ಪೊಲೀಸರು ಅಮಾನತುಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 11. ಫ್ರಾಸಾ-3 ಶ್ರೀ ವಿನಯ್ ಕುಮಾರ್, AEE, CHESCOM, ಮಡಿಕೇರಿ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 29.07.2021 ರಂದು ಪೊಲೀಸರು ನನಗೆ ನಿಪಿ-10 ರಂತೆ ನೋಟಿಸನ್ನು ಜಾರಿ ಮಾಡಿದರು, ಹೊಸಕಾಡು ಬಸವನಹಳ್ಳಿ ಗ್ರಾಮದ ಚಂದ್ರ ರವರ ಜಮೀನ್ ಬಳಿ ಬರುವಂತೆ ನೋಟಿಸ್ ನೀಡಿದರು. ಆ ಪ್ರಕಾರ ನಾನು ಸ್ಥಳಕ್ಕೆ ಹೋದೆ. ನಾವು ಸ್ಥಳಕ್ಕೆ ಹೋದಾಗ ಅಲ್ಲಿ ಒಂದು ಆನೆ ಸತ್ತು ಬಿದ್ದಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 12. ಫ್ರಾಸಾ-3 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಆನಂತರ ನನ್ನನ್ನು ಚಂದ್ರ ರವರ ಮನೆ ಬಳಿ ಕರೆದುಕೊಂಡು ಹೋದರು. ಚಂದ್ರ ರವರ ಜಮೀನಿನ ಸುತ್ತ ಸೋಲಾರ್ ತಂತಿಯನ್ನ ಅಳವಡಿಸಿದ್ದರು. ಆರೋಪಿ ತನ್ನ ಮನೆಯ ವಿದ್ಯುತ್ ಸಂಪರ್ಕದಿಂದ ಬ್ಯಾಟರಿಗೆ ಚಾರ್ಜ್ ಮಾಡಿ ಅದರಿಂದ

ಸೋಲಾರ್ energizer ನ್ನು ಬಳಸಿ ಆ ಮೂಲಕ ಸೋಲಾರ್ ವಿದ್ಯುತ್ ತಂತಿಯನ್ನು ಹರಿಸಿದ್ದರು, ಆದರೆ ಸೋಲಾರ್ ಪ್ಯಾನಲನ್ನ ಅವರು ಅಳವಡಿಸಿರಲಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 13. ಫ್ರಾಸಾ–3 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಪೊಲೀಸರು ಸ್ಥಳದಿಂದ ಬ್ಯಾಟರಿ, ಸೋಲಾರ್ energizer, ಅಲ್ಯುಮಿನಿಯಂ ವೈಯರ್, ಜಿ ಐ ವೈಯರ್, ಇವುಗಳನ್ನ ತೆಗೆದುಕೊಂಡರು. ಆನೆ ಸತ್ತು ಬಿದ್ದ ಜಾಗದಲ್ಲಿ ವೈಯರ್ ಕಾಲಿಗೆ, ಎದೆಗೆ ತಾಗಿಕೊಂಡಿತ್ತು. ಆನೆಯ ಎದೆಗೆ ತಾಗಿದ್ದ ತಂತಿ ಮತ್ತು ಮನೆಯಿಂದ ವಶಪಡಿಸಿಕೊಂಡಿದ್ದ ತಂತಿ ಇವುಗಳನ್ನ ನೋಡಿ ಗುರುತಿಸಿದ್ದು ಆರೋಪಿ ಮನೆ ಬಳಿ ನಿಪಿ–4 ರಂತೆ ಮಹಜರು ಬರೆದಾಗ ನಾನು ಹಾಜರಿದ್ದು, ಮಹಜರು ಕಾಲಕ್ಕೆ ಪೊಲೀಸರು ಸ್ಥಳದಲ್ಲಿ ನಿಪಿ–3 ರಂತೆ ಫೋಟೋ ತೆಗೆದಿರುತ್ತಾರೆ ಹಾಗೂ ಈ ಸಂಬಂಧ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 14. ಫ್ರಾಸಾ–7 ಶ್ರೀ ಮಂಜೇಗೌಡ ವಿ.ಎಸ್, ಅರಣ್ಯ ರಕ್ಷಕ, ಅತ್ತೂರು ಶಾಖೆ ಕುಶಾಲನಗರ ಇವರು ತಮ್ಮ ಸಾಕ್ಷ್ಯದಲ್ಲಿ ಅತ್ತೂರು ಶಾಖೆಯಲ್ಲಿ ದಿನಾಂಕ 29.07.2021 ರಂದು ಕಾಡಾನೆ ಮೃತ ಪಟ್ಟಿದ್ದು, ಆ ರೀತಿ ಆನೆ ಮೃತ ಪಟ್ಟಿದ್ದ ಜಾಗ ಗೌರಮ್ಮ ಮತ್ತು ಲತಾ ಎಂಬುವರಿಗೆ ಸೇರಿದ ಶುಂಠಿ ಬೆಳೆ ಬೆಳೆದಿರುವ ಜಾಗ ಆಗಿತ್ತು. ನಾನು ಸದರಿ ಜಾಗವನ್ನ ನೋಡಿರುತ್ತೇನೆಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 15. ಫ್ರಾಸಾ–7 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನಾವು ಸ್ಥಳಕ್ಕೆ ಹೋಗಿ ನೋಡಿದಾಗ ಸೋಲಾರ್ ತಂತಿ ಆನೆಯ ಸೋಂಡಿಲು ಭಾಗಕ್ಕೆ ಸಂಪರ್ಕ ಹೊಂದಿ ಆನೆ ಮೃತ ಪಟ್ಟಿತ್ತು. ಆರೋಪಿ ತಮ್ಮ ಜಮೀನಿನ ಬೇಲಿ ಸುತ್ತಲು ಸೋಲಾರ್ ತಂತಿ ಅಳವಡಿಸಿ ಅದಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸ್ಧಿದ್ದರಿಂದ ಆನೆ ಮೃತಪಟ್ಟಿತ್ತು. ಈ ಸಂಬಂಧವಾಗಿ ಫ್ರಾಸಾ–2 ರವರು ಪಿರ್ಯಾದು ಕೊಟ್ಟಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 16. ಫ್ರಾಸಾ–8 ಶ್ರೀಮತಿ ಉಷಾ ಸಿ. ಎನ್, ವಿದ್ಯುತ್ ಪರಿವೀಕ್ಷಕರು, ವಿದ್ಯುತ್ ಪರೀಕ್ಷಕರ ಕಚೇರಿ, ಹಾಸನ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 29–07–2021 ರಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ಲಿಮಿಟೆಡ್ ಸೆಕ್ಷನ್ ಆಫೀಸರ್ ವಿನಯ್ ಇವರು ಫೋನ್ ಮಾಡಿ ಕಾಡಾನೆ ವಿದ್ಯುತ್ ಷಾಕ್ ಆಗಿ ಕುಶಾಲನಗರ, ಬಸವನಹಳ್ಳಿ, ಹೊಸಕಾಡು ಗ್ರಾಮದ ವ್ಯಾಪ್ತಿಗೆ ಸೇರಿದ ಗೌರಮ್ಮ ಮತ್ತು ಲತಾ ಎಂಬುವವರ ಶುಂಠಿ ಗದ್ದೆ ಜಮೀನಿನಲ್ಲಿ ಮೃತ ಪಟ್ಟಿದೆ ಎಂದು ತಿಳಿಸಿದ್ದರು. ನಾನು ಅದೇ ದಿನ ದಿನಾಂಕ 29.07.2021 ರಂದು ಕುಶಾಲನಗರದ ಬಸವನಹಳ್ಳಿ, ಹೊಸಕಾಡು ಗ್ರಾಮದ ವ್ಯಾಪ್ತಿಗೆ ಸೇರಿದ ಗೌರಮ್ಮ ಮತ್ತು ಲತಾ ಎಂಬುವವರ ಶುಂಠಿ ಗದ್ದೆ ಜಮೀನಿಗೆ ಭೇಟಿ ಕೊಟ್ಟು ಪರಿಶೀಲನೆ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 17. ಫ್ರಾಸಾ–8 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನಾನು ಸದರಿ ಜಮೀನಿನಲ್ಲಿ ಪರಿಶೀಲನೆ ಮಾಡಿದಾಗ ಆನೆಯ ಸೋಲಾರ್ ತಂತಿ ಬೇಲಿಗೆ ಸಿಲುಕಿಕೊಂಡು ವಿದ್ಯುತ್ ಷಾಕ್ ಆಗಿ ಮೃತ ಪಟ್ಟಿತ್ತು. ಸೋಲಾರ್ ತಂತಿ ಬೇಲಿ ಇದ್ದು, ಸದರಿ ತಂತಿ ಬೇಲಿ ಚಂದ್ರು ಅವರು ಬೆಳಯನ್ನು ಸಂರಕ್ಷಣೆ

ಮಾಡಲು ತಂತಿ ಬೇಲಿ ಹಾಕಿರುವುದು ಕಂಡುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 18. ಫ್ರಾಸಾ-8 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಸದರಿ ತಂತಿ ಬೇಲಿಗೆ ಎಲ್ಲಿಂದ ವಿದ್ಯುತ್ ಸರಬರಾಜು ಆಗುತ್ತದೆ ಎಂದು ಆರೋಪಿಯ ಮನೆಯನ್ನು ಪರಿಶೀಲನೆ ಮಾಡಿದ್ದೆನು ಆಗ ಆತನ ಮನೆಯಲ್ಲಿ ಸೋಲಾರ್ ಫೆನ್ಸ್ Energizer ಬ್ಯಾಟರಿ ಚಾರ್ಜರ್ ಮತ್ತು ಒಂದು ಬ್ಯಾಟರಿ ಇದ್ದವು. ಆದರೆ ಅದು ಸೋಲಾರ್ ಪ್ಯಾನೆಲ್ ಇರಲಿಲ್ಲ. ಬದಲಿಗೆ ಆರೋಪಿತನು ಮನೆಯ ವಿದ್ಯುತ್ 230 ಓಲ್ಡ್ ಪ್ಲಗ್ ಪಾಯಿಂಟ್ ನಿಂದ ಸೋಲಾರ್ ಉಪಕರಣಗಳಿಗೆ ಕನೆಕ್ಷನ್ / ವಿದ್ಯುತ್ ಸಂಪರ್ಕ ಕೊಟ್ಟಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 19. ಫ್ರಾಸಾ-8 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನಂತರ ಅರಣ್ಯ ಇಲಾಖೆಯವರು ಮಹಜರು ಮಾಡಿ ಅವುಗಳನ್ನೆಲ್ಲವನ್ನು ವಶಪಡಿಸಿಕೊಂಡು ಇಂಡಿಯನ್ ಇನ್ಸೂಟಿಟ್ಯೂಟ್ ಆಫ್ ಸೈನ್ಸ್, ಬೆಂಗಳೂರಿಗೆ ಪರೀಕ್ಷೆಗೆ ಒಳಪಡಿಸಲು ಕಳುಹಿಸಿಕೊಟ್ಟರು. ನಾನು ಇಂಡಿಯನ್ ಇನ್ಸೂಟಿಟ್ಯೂಟ್ ಆಫ್ ಸೈನ್ಸ್ , ಬೆಂಗಳೂರು ರವರ ವರದಿಯನ್ನು ಪರಿಶೀಲನೆ ಮಾಡಿ ಐ ಎಸ್ (ಇಂಡಿಯನ್ ಸ್ಟ್ಯಾಂಡರ್ಡ್) ಮೌಲ್ಯಗಳಿಗೆ ಕಂಪೇರ್ ಮಾಡಿದಾಗ ಸೋಲಾರ್ ಫೆನ್ಸ್ Energizer ನಿಗದಿತ ಸ್ಟ್ಯಾಂಡರ್ಡ್ ಅನುಸಾರ ಇರುವುದು ಗೊತ್ತಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 20. ಫ್ರಾಸಾ-8 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಸೋಲಾರ್ ಪ್ಯಾನೆಲ್ ಬದಲು ಆರೋಪಿತನು ಅಕ್ರಮವಾಗಿ ಪ್ಲಗ್ ಪಾಯಿಂಟ್ ವಿದ್ಯುತ್

ಬಳಕೆಯಿಂದ ಸೋಲಾರ್ ತಂತಿ ಬೇಲಿಗೆ ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ವಿದ್ಯುತ್ ಹರಿದಿದ್ದರಿಂದ ಸೋಲಾರ್ ತಂತಿ ಬೇಲಿಗೆ ಆನೆ ಸಂಪರ್ಕ ಕ್ಕೆಬಂದು ಆನೆ ಮೃತ ಪಟ್ಟಿದೆ ಎಂದು ನನ್ನ ಅಭಿಪ್ರಾಯವನ್ನು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು (Deputy Chief Electrical Inspector), ಮೈಸೂರು ರವರಿಗೆ ವರದಿ ಸಲ್ಲಿಸಿರುತ್ತೇನೆ. ನನ್ನ ವರದಿಯನ್ನು ಆಧರಿಸಿ ಉಪ ಮುಖ್ಯ ವಿದ್ಯುತ್ ಪರಿ ವೀಕ್ಷಕರು, ಮೈಸೂರು ಇವರು ಸರಕಾರಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 21. ಫ್ರಾಸಾ-9 ಡಾ. ಬಿ.ಸಿ ಚಿಟ್ಟಿಯಪ್ಪ, ನಿವೃತ್ತ ಉಪ ನಿರ್ದೇಶಕರು, ಪಶುಪಾಲನ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಕೊಡಗು ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 29.07.2021 ರಂದು ಅರಣ್ಯ ಇಲಾಖೆ, ಕುಶಾಲನಗರ ವಲಯ ರವರಿಂದ ಹೊಸಕಾಡು ಗ್ರಾಮ, ಸುಂಟಿಕೊಪ್ಪ ಹೋಬಳಿಯಲ್ಲಿ ಆನೆ ಮೃತ ಪಟ್ಟಿರುತ್ತದೆ ಎಂದು, ಅದಕ್ಕೆ ಮರಣೋತ್ತರ ಪರೀಕ್ಷೆ ಮಾಡಲು ನನಗೆ ಕೋರಿಕೊಂಡಿದ್ದರು. ನಾನು ಅದೇ ದಿನ ದಿನಾಂಕ 29.07.2021 ರಂದು ಸ್ಥಳಕ್ಕೆ ಹೋಗಿ ಬೆಳಿಗ್ಗೆ 11.00 ಗೆ ಫ್ರಾರಂಭಿಸಿ 3 ಗಂಟೆಗಳ ಕಾಲ ಆನೆಯ ಮರಣೋತ್ತರ ಪರೀಕ್ಷೆ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 22. ಫ್ರಾಸಾ-9 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನಾನು ಆನೆಯ ಮರಣೋತ್ತರ ಪರೀಕ್ಷೆ ಮಾಡುವಾಗ ಈ ಕೆಳಕಂಡ ಹೊರಗಾಯಗಳು ಕಂಡುಬಂದಿರುತ್ತದೆ. (1) ಆನೆಯ ಸೊಂಡಿಲಿನ ತುದಿಯಿಂದ 4 ಇಂಚು ಮೇಲ್‌ಬಾಗದಲ್ಲಿ ಆಳವಾದ ಸುಟ್ಟ ಗಾಯ ಇತ್ತು. ಸದರಿ ಸುಟ್ಟ ಗಾಯದ ಮೇಲೆ ವಿದ್ಯುತ್ ತಂತಿ ಇತ್ತು. After dissection of the Elephant

body ಮಾಡಿ ನೋಡಿದಾಗ ಆನೆಯ ಮೆದುಳಿನಲ್ಲಿ ರಕ್ತಸ್ರಾವ ಆಗಿತ್ತು, pleura congested, mucosal congested, both lungs congested and extra vessation of blood, pericardium congested, large quantity of pericardial fluid found, heart congested, large vessels concerned, lymphatic gland congested, peritoneum congested and large quantity of fluid found, mouth tharlynx, oesophagush, stomach congested, stomach haemmorroghic, stomach content normal, small and large intstines, liver, gall blader, spleen haemmorroghic. Kidneys congested, extra vessation of blood. Urinary bladder haemmorroghic, due to vessation of the blood urine color was dark, genital organs penis protruded out and congested. Pieces of lungs, livers, stomach, kidney and stomach contents in 10% formalene solution ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 23. ಪ್ರಾಸಾ-9 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ In my opinion as to the cause of death, extra vessation of blood from musculature superficial lymphnodes of head and neck and pushed towards anterior portion and less towards hind quarters. Damage of central nervous system causing respiratory collapse, cardiac arrest and shock. The Elephant died due to electric shock. Accordingly, I issued Postmortem report as

per Ex.P.8 ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 24. ಫಾಸಾ-10 ಶ್ರೀ ಹೆಚ್. ಎಸ್. ಸಂತೋಷ್, ಕಂದಾಯ ಪರಿವೀಕ್ಷಕರು, ಕುಶಾಲನಗರ ಇವರು ತಮ್ಮ ಸಾಕ್ಷ್ಯದಲ್ಲಿ ಕುಶಾಲನಗರ ಗ್ರಾಮಾಂತರ ಪೊಲೀಸರು ನಮ್ಮ ತಹಶೀಲ್ದಾರ್ ಕಛೇರಿಗೆ ಸರ್ವೆ ನಂಬರ್ 1/83 ಬಸವನಳ್ಳಿ ಗ್ರಾಮದ ಆನೆ ಮೃತ ಪಟ್ಟ ಜಾಗೆಯ ಪರಿಶೀಲನೆ ಮಾಡಿ ಫಹಣಿ ಪತ್ರಿಕೆ ಕೊಡುವಂತೆ ಕೋರಿದರು, ಅದರಂತೆ ನಾನು ದಿನಾಂಕ 30.08.2021 ರಂದು ಸ್ಥಳಕ್ಕೆ ಹೋಗಿ ಬೇಟಿ ಕೊಟ್ಟು, ಸ್ಥಳದಲ್ಲಿ ತೋರಿಸಿದ ಜಾಗೆಯ ಪಂಚನಾಮೆಯನ್ನು ಗ್ರಾಮಸ್ಥರ ಸಮಕ್ಷಮ ಮಾಡಿ ಪೊಲೀಸರಿಗೆ ಫಹಣಿ ಪತ್ರಿಕೆ ಕೊಟ್ಟಿರುತ್ತೇನೆ. ಸದರಿ ಸರ್ವೆ ನಂಬರ್ 1/83 ಎರಡು ಎಕರೆ ಜಮೀನು ಇದ್ದು, ಹೊನ್ನಯ್ಯ ಇವರಿಗೆ ಸೇರಿದ ಜಮೀನು ಇತ್ತು. ಆ ಬಗ್ಗೆ ನಾನು ವರದಿ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 25. ಫಾಸಾ-11 ಶ್ರೀ ಅಲ್ತಾಫ್ ಹುಸೇನ್ ಜಕಾರ್ತಿ, ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಮೈಸೂರು ಇವರು ತಮ್ಮ ಸಾಕ್ಷ್ಯದಲ್ಲಿ ಫಾಸಾ-8 ರವರು ಮಡಿಕೇರಿ ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ಬಸವನಹಳ್ಳಿ ಹೊಸಕಾಡು ಗ್ರಾಮದಲ್ಲಿ ಒಂದು ಗಂಡಾನೆಗೆ ಸಂಭವಿಸಿದ ಮರಣಾಂತಿಕ ವಿದ್ಯುತ್ ಅಪಘಾತದ ತನಿಖಾ ವರದಿಯನ್ನು ನನಗೆ ದಿನಾಂಕ 04.05.2022 ರಂದು ಸಲ್ಲಿಸಿದ್ದು, ಅದರಂತೆ ನಾನು ಸದರಿ ತನಿಖಾ ವರದಿಯನ್ನು ಪರಿಶೀಲಿಸಿ ದಿನಾಂಕ 23.05.2022 ರಂದು ಸರ್ಕಾರಕ್ಕೆ ನನ್ನ ಅಭಿಪ್ರಾಯವನ್ನ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 26. ಪ್ರಾಸಾ-12 ಶ್ರೀ ಎಸ್ ಕೆ ಪ್ರಸನ್ನ, ಮುಖ್ಯ ಪೇದೆ, ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 10.08.2021 ರಂದು ತನಿಖಾಧಿಕಾರಿಗಳು ನನಗೆ ಈ ಕೇಸಿನಲ್ಲಿ ವಶಪಡಿಸಿಕೊಂಡ ಎರಡು ಸೀಲಾದ ವಸ್ತುಗಳನ್ನು ಕೊಟ್ಟು ಅವುಗಳನ್ನು RFSL ಮೈಸೂರಿಗೆ ಕೊಟ್ಟು ಬರಲು ನನಗೆ ತಿಳಿಸಿದರು, ಅದೇ ದಿನ ನಾನು ಸದರಿ ಎರಡು ಸೀಲಾದ ವಸ್ತುಗಳನ್ನು RFSL ಮೈಸೂರು ರವರಿಗೆ ಕೊಟ್ಟು ಹಿಂಬರಹ ಪಡೆದುಕೊಂಡು ಬಂದು ತನಿಖಾಧಿಕಾರಿಯವರಿಗೆ ಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 27. ಪ್ರಾಸಾ-12 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ದಿನಾಂಕ 11.08.2021 ರಂದು ತನಿಖಾಧಿಕಾರಿಗಳು ನನಗೆ ಈ ಕೇಸಿನಲ್ಲಿ ವಶಪಡಿಸಿಕೊಂಡ ಒಂದು Solar Fence Energizer ನ್ನು ನನಗೆ ಕೊಟ್ಟು FSL ಬೆಂಗಳೂರಿಗೆ ಪರೀಕ್ಷೆಗಾಗಿ ಕೊಟ್ಟು ಬರಲು ನನಗೆ ತಿಳಿಸಿದರು, ಅದೇ ದಿನ ನಾನು ಸದರಿ ಒಂದು Solar Fence Energizer ನ್ನು FSL ಬೆಂಗಳೂರು ರವರಿಗೆ ಕೊಟ್ಟು ಹಿಂಬರಹ ಪಡೆದುಕೊಂಡು ಬಂದು ತನಿಖಾಧಿಕಾರಿಯವರಿಗೆ ಕೊಟ್ಟಿರುತ್ತೇನೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 28. ಪ್ರಾಸಾ-13 ಶ್ರೀ ಶಿವಶಂಕರ, ಪಿ ಎಸ್ ಐ., ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 29.07.2021 ರಂದು ಬೆಳಿಗ್ಗೆ 10.00 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ, ಪ್ರಾಸಾ-2 ರವರು ಒಂದು ಲಿಖಿತ ದೂರನ್ನು ನೀಡಿದ್ದು, ಸದರಿ ದೂರನ್ನು ಸ್ವೀಕರಿಸಿ, ಸದರಿ ದೂರಿನ ಆಧಾರದ ಮೇಲೆ ಠಾಣಾ ಮೊಕದಮ್ಮೆ ಸಂಖ್ಯೆ 96/2021

ನ್ನು ದಾಖಲು ಮಾಡಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೂ ಮತ್ತು ನನ್ನ ಮೇಲಾಧಿಕಾರಿಗಳಿಗೂ ಕಳುಹಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 29. ಫ್ರಾಸಾ-13 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನಂತರ ಫ್ರಾಸಾ-1 ರವರು ಕೃತ್ಯ ಸ್ಥಳವನ್ನು ತೋರಿಸಿದ್ದು, ಕೃತ್ಯ ಸ್ಥಳವಾದ ಬಸವನಹಳ್ಳಿ ಹೊಸಕಾಡು ಗ್ರಾಮದ ಸರ್ವೆ ನಂಬರ್ 1/83 ರಲ್ಲಿ ಚಾಸಾ-2 ಮತ್ತು ಫ್ರಾಸಾ-1 ರವರ ಸಮಕ್ಷಮ ಸ್ಥಳದಲ್ಲಿ ನಿಪಿ-2 ರಂತೆ ಪಂಚನಾಮೆಯನ್ನು ಮಾಡಿರುತ್ತೇನೆ. ಪಂಚನಾಮೆ ಕಾಲದಲ್ಲಿ ಮೃತ ಪಟ್ಟ ಕಾಡಾನೆಯ ಮರಣೋತ್ತರ ಪರೀಕ್ಷೆಯನ್ನು ಮಾಡಲು ಫ್ರಾಸಾ-9 ರವರಿಗೆ ಮನವಿ ಪತ್ರವನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 30. ಫ್ರಾಸಾ-13 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ಫ್ರಾಸಾ-9 ರವರು ಸದರಿ ಮೃತ ಪಟ್ಟ ಕಾಡಾನೆಯ ಮರಣೋತ್ತರ ಪರೀಕ್ಷೆಯನ್ನು ನಡೆಸಿ ಎರಡು ದಂತಗಳನ್ನ ಸಂಗ್ರಹಿಸಿ ಕೊಟ್ಟಿರುತ್ತಾರೆ. ಸದರಿ ಎರಡು ದಂತಗಳನ್ನು ಸ್ವೀಕರಿಸಿರುತ್ತೇನೆ ಹಾಗೂ ಕಾಡಾನೆಯ ಸೊಂಡಲಿಗೆ ಸಿಕ್ಕಿಹಾಕಿಕೊಂಡಿದ್ದ 16 cm ಉದ್ದದ ತಂತಿಯನ್ನು ನನ್ನ ವಶಕ್ಕೆ ಪಡೆದುಕೊಂಡಿರುತ್ತೇನೆ. ಮರಣೋತ್ತರ ಪರೀಕ್ಷೆ ಆದ ನಂತರ ಮೃತ ಕಾಡಾನೆಯ ದೇಹವನ್ನ ಸ್ಥಳದಲ್ಲಿ ಗುಂಡಿ ತೆಗೆದು ಅದರಲ್ಲಿ ಹಾಕಿ ಮುಚ್ಚಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 31. ಫ್ರಾಸಾ-13 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನಂತರ ಆರೋಪಿ ಚಂದ್ರರವರ ಜಮೀನಿಗೆ ಅಳವಡಿಸಿದ್ದ ತಂತಿ ಬೇಲಿಗೆ ವಿದ್ಯುತ್ ಸಂಪರ್ಕವನ್ನ

ಅಳವಡಿಸಿದ್ದ ಆರೋಪಿಯ ವಾಸದ ಮನೆಯ ಮಹಜರ್ ಅನ್ನು ಸ್ಥಳದಲ್ಲಿ ಹಾಜರಿದ್ದ ಪಂಚರಾದ ಚಾಸಾ-2 ಮತ್ತು ಪ್ರಾಸಾ-1 ಹಾಗೂ KEB Executive Engineer ಪ್ರಾಸಾ-3 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿರುತ್ತೇನೆ. ಪಂಚನಾಮೆ ಕಾಲಕ್ಕೆ ಬ್ಯಾಟರಿ ಚಾರ್ಜರ್, ಬ್ಯಾಟರಿ, ಸೋಲಾರ್ ಎನರ್ಸೈಸರ್, 15 ಅಡಿ ಉದ್ದದ ವಿದ್ಯುತ್ ತಂತಿ, 4 ಅಡಿ ಉದ್ದದ ಅರ್ತಿಂಗ್ ಕಬ್ಬಿಣದ ತಂತಿ, ಇವುಗಳನ್ನ ವಶಕ್ಕೆ ಪಡೆದುಕೊಂಡಿರುತ್ತೇನೆ. ವಶಪಡಿಸಿಕೊಂಡ ಮುದ್ದೆಮಾಲುಗಳೊಂದಿಗೆ ಠಾಣೆಗೆ ಬಂದು ಠಾಣಾ ಮಾಲುಪಟ್ಟಿ ಸಂಖ್ಯೆ 118/2021 ಮತ್ತು 119/2021 ರಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ವರದಿ ಕೊಟ್ಟಿರುತ್ತೇನೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 32. ಪ್ರಾಸಾ-13 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ನಂತರ ದಿನಾಂಕ 30.07.2021 ರಂದು ಸಾಕ್ಷಿದಾರರಾದ ಚಾಸಾ-8 ರಿಂದ ಚಾಸಾ-10 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 05.08.2021 ರಂದು ಮೃತ ಕಾಡಾನೆಯ ಎರಡು ದಂತಗಳನ್ನ ನ್ಯಾಯಾಲಯದ ಆದೇಶದ ಮೇರೆಗೆ ಪ್ರಾಸಾ-2 ರವರಿಗೆ ನೀಡಿ, ಸ್ವೀಕೃತಿಯನ್ನ ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 33. ಪ್ರಾಸಾ-13 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ದಿನಾಂಕ 11.08.2021 ರಂದು ಮರಣೋತ್ತರ ಪರೀಕ್ಷೆ ಸಂದರ್ಭದಲ್ಲಿ ಪ್ರಾಸಾ-9 ರವರು ಸಂಗ್ರಹಿಸಿಟ್ಟುಕೊಂಡ ಮೃತ ಆನೆಯ ವಿಸ್ರ ಸ್ಯಾಂಪಲ್ ಗಳನ್ನ ಪ್ರಾಸಾ-12 ರವರ ಮೂಲಕ ಮೈಸೂರಿನ RFSL ಗೆ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿರುತ್ತೇನೆ. ನಂತರ ಅದೇ ದಿನ ಪಂಚನಾಮೆ ಕಾಲದಲ್ಲಿ ವಶಕ್ಕೆ ಪಡೆದ ಸೋಲಾರ್ ಫೆನ್ಸ್ ಎನರ್ಸೈಸರ್ ಅನ್ನು ಪ್ರಾಸಾ-12 ರವರ ಮೂಲಕ

HEC

ಬೆಂಗಳೂರಿನ FSL ಗೆ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 34. ಫ್ರಾಸಾ–13 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ದಿನಾಂಕ 18.08.2021 ರಂದು ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕುಶಾಲನಗರ ರವರಿಗೆ ವನ್ಯ ಜೀವಿ ಸಂರಕ್ಷಣಾ ಕಾಯ್ದೆ ಕಲಂ 9,39,50,51,52 ರಡಿಯಲ್ಲಿ ಅಧಿಕೃತ ಅಧಿಕಾರಿಯಾದ ಅರಣ್ಯ ಸಂರಕ್ಷಣಾಧಿಕಾರಿಯವರು ಹಾಗೂ ಕಲಂ 135 Electricity Act, ಕಲಂ 12 Electricity Rules, ಕಲಂ 429 IPC ಅಡಿಯಲ್ಲಿ ನಾನು ತನಿಖೆ ಮಾಡಲು ಅನುಮತಿ ಕೋರಿದ್ದು, ಮಾನ್ಯ ನ್ಯಾಯಾಲಯವು ಅನುಮತಿ ನೀಡಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 35. ಫ್ರಾಸಾ–13 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ದಿನಾಂಕ 23.08.2021 ರಂದು ಸದರಿ ಪ್ರಕರಣದ ದೃಡೀಕೃತ ದಾಖಲಾತಿಗಳನ್ನ ನಮ್ಮ ಮೇಲಾಧಿಕಾರಿಗಳಾದ ಉಪ ಅರಣ್ಯ ಸಂರಕ್ಷಣಾಧಿಕಾರಿ ಮಡಿಕೇರಿ ರವರಿಗೆ ನೀಡಿರುತ್ತೇನೆ. ನಂತರ ದಿನಾಂಕ 04.09.2021 ರಂದು ಮೈಸೂರಿನ RFSL ನಿಂದ ಬಂದ ವರದಿಯನ್ನ ಸ್ವೀಕರಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 36. ಫ್ರಾಸಾ–13 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ದಿನಾಂಕ 09.10.2021 ರಂದು ಸಾಕ್ಷಿದಾರರಾದ ಚಾಸಾ–5 ರಿಂದ ಚಾಸಾ–7 ರವರ ಹೇಳಿಕೆಗಳನ್ನ ಪಡೆದುಕೊಂಡಿರುತ್ತೇನೆ. ಚಾಸಾ–5 ರಿಂದ ಚಾಸಾ–7 ರವರು ನಿಪಿ–11 ರಿಂದ ನಿಪಿ–13 ರಂತೆ ನನ್ನ ಮುಂದೆ ಹೇಳಿಕೆ

ನೀಡಿರುತ್ತಾರೆ. ನಂತರ ಅದೇ ದಿನ ಚಾಸಾ-7 ರವರು ಜಮೀನಿನಲ್ಲಿ ಕೃಷಿ ಮಾಡಲು ಮಾಡಿಕೊಂಡ ಬೋಗ್ಯ ಪತ್ರದ (Lease deed) ಜೆರಾಕ್ಸ್ ಪ್ರತಿಯನ್ನ ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 37. ಫ್ರಾಸಾ-13 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ದಿನಾಂಕ 14.11.2021 ರಂದು ಬೆಂಗಳೂರಿನ FSL ರವರು ಪರೀಕ್ಷೆ ನಡೆಸಲು ಸರಿಯಾದ ಉಪಕರಣಗಳು ಇಲ್ಲದ ಕಾರಣ ಸೋಲಾರ್ ಫೆನ್ಸ್ ಎನರ್ಸೈಸರ್ ಅನ್ನು ಹಿಂತಿರುಗಿ ಕಳುಹಿಸಿದ್ದು, ಅದನ್ನು ಸ್ವೀಕರಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 38. ಫ್ರಾಸಾ-13 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ದಿನಾಂಕ 03.09.2021 ರಂದು ತಹಶೀಲ್ದಾರ್ ರವರು ಕುಶಾಲನಗರ ರವರಿಂದ ಬಸವನಹಳ್ಳಿ ಗ್ರಾಮದ ಸರ್ವೆ ನಂಬರ್ 1/83 ರ ಜಾಗೆಯ RTC, ಕಂದಾಯ ಪರಿವೀಕ್ಷಕರು ನೀಡಿದ ಮಹಜರ್ ಪ್ರತಿ, ಹಾಗೂ ವರದಿಯನ್ನ ಸ್ವೀಕರಿಸಿರುತ್ತೇನೆ. ದಿನಾಂಕ 17.02.2022 ರಂದು ನನಗೆ ವರ್ಗಾವಣೆ ಆಗಿದ್ದರಿಂದ ಮುಂದಿನ ತನಿಖೆಯನ್ನು ಫ್ರಾಸಾ-14 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 39. ಫ್ರಾಸಾ-14 ಶ್ರೀ ಚಂದ್ರಶೇಖರ್ ಹೆಚ್.ವಿ., ಪಿ ಎಸ್ ಐ., ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 18.02.2022 ರಂದು ಈ ಪ್ರಕರಣದ ಕಡತವನ್ನು ಫ್ರಾಸಾ-13 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ. ದಿನಾಂಕ

02.03.2022 ರಂದು ಈ ಪ್ರಕರಣದಲ್ಲಿ ಮೃತಪಟ್ಟಿರುವ ಕಾಡಾನೆ ಬಗ್ಗೆ ದೃಡೀಕರಣ ಪತ್ರ ಕೊಡುವಂತೆ ಕೋರಿ ಹಾಸನದ ವಿದ್ಯುತ್ ಪರಿವೀಕ್ಷಕರಿಗೆ ಮನವಿ ಪತ್ರ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 40. ಪ್ರಾಸಾ-14 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ ದಿನಾಂಕ 27.06.2022 ರಂದು ವಿದ್ಯುತ್ ಪರಿವೀಕ್ಷಣಾಲಯ ಹಾಸನ ರವರಿಂದ ವರದಿಯನ್ನು ಸ್ವೀಕರಿಸಿಕೊಂಡು ತನಿಖೆ ಮುಗಿದ ನಂತರ ಆರೋಪಿತನ ವಿರುದ್ಧ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

ಪ್ರಶ್ನೆ 41. ನೀವು ಇನ್ನೇನಾದರೂ ಹೇಳುವುದಿದೆಯೇ?

ಉತ್ತರಃ

ಪ್ರಶ್ನೆ 42. ಈ ಪ್ರಕರಣದಲ್ಲಿ ನೀವೇನಾದರು ನಿಮ್ಮ ಪರ ಸಾಕ್ಷಿ ವಿಚಾರಣೆಗಳನ್ನು ಮಾಡಲು ಇಚ್ಛೆ ಪಡುತ್ತೀರಾ?

ಉತ್ತರಃ

(Certified that the examination of the above accused is taken in my presence and on my personal hearing and that the record contains full and true account of statement made by him, on this the **25th day of March 2026**).

25/3/2026

(ಹೊಸಮನಿ ಪುಂಡಲಿಕ)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ಕೊಡಗು-ಮಡಿಕೇರಿ.